# ಭಾರೀ ಬಾತುಕೋಳಿ!







ಈ ಬಾತುಕೋಳಿಯ ಎತ್ತರ 60 ಅಡಿ; ತೂಕ ಅರ್ಧ ಟನ್. 2012 ಡಿಸೆಂಬರ್ 11ರ ಮುಂಜಾನೆ 8–30 ಗಂಟೆಗೆ, ಥೇಮ್ಸ್ ನದಿಯಲ್ಲಿ ಈ ಬೃಹತ್ ಬಾತುಕೋಳಿ ತೇಲುತ್ತ ಬಂತು. ಡಿಸೆಂಬರಿನ ನಡುಗಿಸುವ ಚಳಿಯಲ್ಲೂ ಲಂಡನ್ನಿನ ಜನತೆ ನದಿ ತೀರಕ್ಕೆ ಗುಂಪು–ಗುಂಪಾಗಿ ಬಂದು, ಈ ಭಾರೀ ಬಾತುಕೋಳಿಯನ್ನು ನೋಡಿ ಆನಂದಿಸಿತು.

ಇದು ಜೀವಂತ ಬಾತುಕೋಳಿ ಅಲ್ಲ. ಮನುಷ್ಯ ನಿರ್ಮಿತ ರಬ್ಬರ್ ಕೋಳಿ. ಇದನ್ನು ನಿರ್ಮಿಸಲು 2 ಲಕ್ಷ 50 ಸಾವಿರ ಪೌಂಡ್ ಖರ್ಚಾಗಿದೆಯಂತೆ. ರೂಪಾಯಿ ಲೆಕ್ಕದಲ್ಲಿ ಸುಮಾರು 2 ಕೋಟಿ 20 ಲಕ್ಷ. 8 ಜನರ ಒಂದು ತಂಡದ ಸದಸ್ಯರು 800 ಗಂಟೆಗಳ ಕಾಲ ದುಡಿದು ಈ ಅಪರೂಪದ ಬಾತುಕೋಳಿಯನ್ನು ನಿರ್ಮಿಸಿದ್ದಾರೆ.

ಇಂಗ್ಲೆಂಡ್‌ನ ಜನರ ಮನಸ್ಸು ಮುದಗೊಳ್ಳಲಿ; ಅವರ ಮುಖದಲ್ಲಿ ನಗು ಅರಳಲಿ ಎಂಬುದೇ ಇದರ ಹಿಂದಿರುವ ಉದ್ದೇಶ. ಈ ಭಾರೀ ಬಾತುಕೋಳಿಯನ್ನು ನದಿಯ ಪ್ರವಾಹದಲ್ಲಿ ತೇಲಿ ಬಿಡಲಾಗಿತ್ತು. ಇದರ ಚಲನೆಗೆ ಅಡ್ಡಿ ಬರದಿರಲಿ ಎಂದು ಟಾವರ್ ಸೇತುವೆಯನ್ನು ಮೇಲಕ್ಕೆತ್ತಲಾಗಿತ್ತು. ಕಣ್ಣು ಕೋರೈಸುವ ಹಳದಿ ಬಣ್ಣದ ಹಾಗೂ ಕೆಂಪು ಚುಂಚಿನ ಈ ಬಾತುಕೋಳಿಯ ಬಗೆಗೆ ಮೊದಲೇ ಸಾಕಷ್ಟು ಪ್ರಚಾರ ಮಾಡಲಾಗಿತ್ತು. ಹೀಗಾಗಿ ಬಹಳ ಜನ ಈ ಮೋಜಿನ ಕೋಳಿಯನ್ನು ನೋಡಿ, ನಕ್ಕು ಆನಂದಪಟ್ಟರು. ಈ ಯೋಜನೆಯನ್ನು ರೂಪಿಸಿದ ಅಲ್ಲಿನ ವೆಸ್ಟ್ ಇಂಡಿಯಾ ಡಾಕ್ ಸಂಸ್ಥೆಯ ಉದ್ದೇಶವೂ ಇದೇ ಆಗಿತ್ತು.

ಒಂದು ಸಮೀಕ್ಷೆಯ ಪ್ರಕಾರ ಬ್ರಿಟನ್ನಿನ ವಯಸ್ಕರು ಪ್ರತಿದಿನ ಸರಾಸರಿ 7.2 ಬಾರಿ ನಗುತ್ತಾರಂತೆ. ಆರೋಗ್ಯವಂತರಾಗಿರಲು ಹಾಗೂ ಸುಖಮಯ ಜೀವನ ಸಾಗಿಸಲು ಒಬ್ಬ ಮನುಷ್ಯ ಪ್ರತಿ ದಿನ 15 ಬಾರಿಯಾದರೂ ನಗಬೇಕಂತೆ. 60 ವರ್ಷಗಳ ಹಿಂದೆ ಒಬ್ಬ ಮನುಷ್ಯ ದಿನಕ್ಕೆ 18 ನಿಮಿಷ ನಗುತ್ತಿದ್ದನಂತೆ. ಈಗ ಆ ಪ್ರಮಾಣ 6 ನಿಮಿಷಕ್ಕೆ ಕುಗ್ಗಿದೆಯಂತೆ.

ಅಂದಹಾಗೆ ಈ ಯೋಜನೆಯ ರೂವಾರಿ 'ಫಂಡೇಷನ್' (FUNDATION) ಎಂಬ ಸಂಸ್ಥೆಯ ನಿರ್ವಾಹಕ ನಿರ್ದೇಶಕ ಮೈಕೆಲ್ ಸಾಂಡರ್ಸ್.

■ **ಸುಭಾಸ ಯಾದವಾಡ**